# ಕುಣಿತದ ಶಕ್ತಿಮದ್ದು!

ನಟಿ ರಾಧಿಕಾ ಅವರ ಉತ್ಸಾಹದ ರಹಸ್ಯವೇನಾದರೂ ಏನು? 'ಮತ್ತೇನಿಲ್ಲ, ನೃತ್ಯ' ಎನ್ನುವುದು ಅವರನ್ನು ಬಲ್ಲವರ ಮಾತು. 'ಡಾನ್ಸ್ ಅಂದರೆ ನನಗೆ ಸಿಕ್ಕಾಪಟ್ಟೆ ಇಷ್ಟ. ಡಾನ್ಸ್ ಮಾಡಲು ತೊಡಗಿದರೆ ನನ್ನನ್ನು ನಾನೇ ಮರೆಯುತ್ತೇನೆ. ಕುಣಿಯುವಾಗ ನನಗೆ ಎಲ್ಲಿಂದ ಉತ್ಸಾಹ ಬರುತ್ತದೋ ಗೊತ್ತಾಗುವುದೇ ಇಲ್ಲ'– ಹೀಗೆ, ನೃತ್ಯದ ಕುರಿತ ಅವರ ಮಾತೂ ಏರುಗತಿಯಲ್ಲೇ ಇರುತ್ತದೆ.

'ಸ್ವೀಟಿ' ಚಿತ್ರದಲ್ಲಿ ರಾಧಿಕಾ ಅವರ ನೃತ್ಯೋಲ್ಲಾಸ ಪರಿಣಾಮಕಾರಿಯಾಗಿ ಮೂಡಿಬಂದಿದೆಯಂತೆ. ಹಾಡುಗಳಲ್ಲಿ ಅವರು ಮನತಣಿಯೇ ಕುಣಿದಿದ್ದಾರೆ. 'ಕ್ಯಾಮೆರಾ ಮುಂದೆ ನಿಂತ ಮೇಲೆ ಚೆನ್ನಾಗಿ ಅಭಿನಯಿಸಬೇಕು, ಕುಣಿಯಬೇಕು ಎನ್ನುವುದಷ್ಟೇ ನನ್ನ ಮನಸ್ಸಿನಲ್ಲಿ ಇರುತ್ತಿತ್ತು' ಎನ್ನುವ ಅವರಿಗೆ, 'ಸ್ವೀಟಿ'ಯ ಹಾಡುಗಳು ಸಿಕ್ಕಾಪಟ್ಟೆ ಕಿಕ್ ಕೊಟ್ಟಿವೆ. ಅರ್ಜುನ್ ಜನ್ಯ 'ಸ್ವೀಟಿ' ಚಿತ್ರದ ಸಂಗೀತ ನಿರ್ದೇಶಕರು. 'ನಾನು ಕೇಳಿದ್ದಕ್ಕಿಂತಲೂ ಒಳ್ಳೆಯ ಹಾಡುಗಳನ್ನು ಅವರು ನೀಡಿದ್ದಾರೆ' ಎನ್ನುವುದು ರಾಧಿಕಾ ಪ್ರಶಂಸೆ. ಗೋವಾದಲ್ಲಿ ಚಿತ್ರೀಕರಣಗೊಂಡ ಗೀತೆಯೊಂದಕ್ಕೆ ಇಡೀ ದಿನ ಕುಣಿದರೂ ಅವರಿಗೆ ದಣಿವಾಗಲೇ ಇಲ್ಲವಂತೆ. ಮನೆಯಲ್ಲಿ ಇರುವಾಗಲೂ ರಾಧಿಕಾ ಪ್ರತಿದಿನ ಅರ್ಧ ತಾಸಾದರೂ ನೃತ್ಯಾಭ್ಯಾಸ ಮಾಡುತ್ತಾರಂತೆ.

ವಿಜಯಲಕ್ಷ್ಮಿ ಸಿಂಗ್ 'ಸ್ವೀಟಿ' ಚಿತ್ರದ ನಿರ್ದೇಶಕಿ. ನೃತ್ಯದಲ್ಲಿ ಮುಳುಗಿಹೋಗುವ ರಾಧಿಕಾ ತನ್ಮಯತೆ ಅವರಿಗೆ ಬೆರಗು ಹುಟ್ಟಿಸಿದೆ. 'ಅಭಿನಯದ ಬಗೆಗಿನ ಬದ್ಧತೆಯೂ ಕಡಿಮೆಯದಲ್ಲ' ಎಂದವರು ತಮ್ಮ ಚಿತ್ರದ ನಾಯಕಿಯನ್ನು ಮೆಚ್ಚಿಕೊಳ್ಳುತ್ತಾರೆ. ಸ್ವೀಟಿಯ ನಾಯಕ ಆದಿತ್ಯ ಅವರಿಗೂ ಗೀತೆಗಳು ಸುಂದರವಾಗಿ ಮೂಡಿ ಬಂದಿರುವ ಬಗ್ಗೆ ಖುಷಿಯಿದೆ.

ಅಂದಹಾಗೆ, ರಾಧಿಕಾ ನಟನೆ–ನಿರ್ಮಾಣದ 'ಸ್ವೀಟಿ' ಚಿತ್ರದ ಈಗ ತೆರೆ ಕಾಣಲು ಸಿದ್ಧವಾಗಿದೆ.





# ಐರಾವತವೂ ಅಂಬರೀಷನೂ...

'ಬುಲ್ ಬುಲ್' ಚಿತ್ರ ನೂರು ದಿನಗಳನ್ನು ಪೂರೈಸಿದ ಬೆನ್ನಿಗೇ ದರ್ಶನ್ ನಾಯಕತ್ವದ ಎರಡು ಚಿತ್ರಗಳು ಸೆಟ್ಟೇರಿವೆ. ಮೊದಲನೆಯದು 'ಅಂಬರೀಷ', ಮತ್ತೊಂದು 'ಐರಾವತ'. ಎರಡೂ ದೊಡ್ಡ ಬಜೆಟ್ಟಿನ ಚಿತ್ರಗಳು ಎನ್ನುವುದು ವಿಶೇಷ.

'ಅಂಬರೀಷ' ಮಹೇಶ್ ಸುಖಧರೆ ನಿರ್ದೇಶನದ ಚಿತ್ರ. 'ಸೈನಿಕ' ಚಿತ್ರದ ಮೂಲಕ ಗಮನಸೆಳೆದಿದ್ದ ಸುಖಧರೆ, ಆನಂತರ ಹೊಸಬರ ಅಬ್ಬರದಲ್ಲಿ ಮಂಕಾದಂತಿದ್ದರು. ಇದೀಗ 'ಅಂಬರೀಷ' ಮೂಲಕ ಅವರು ದೊಡ್ಡ ರೀತಿಯಲ್ಲಿ ಗಾಂಧಿನಗರದಲ್ಲಿ ಸುದ್ದಿಯಲ್ಲಿದ್ದಾರೆ. ದರ್ಶನ್ ಜೊತೆಗೆ ಅಂಬರೀಷ್ ಹಾಗೂ ಸುಮಲತಾ ದಂಪತಿ ಮುಖ್ಯಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಈ ಚಿತ್ರದ ವಿಶೇಷಗಳಲ್ಲೊಂದು. ಬೆಂಗಳೂರಿನ ಲ್ಯಾಂಡ್ ಮಾಫಿಯಾದ ಕಥೆ ಈ ಚಿತ್ರದಲ್ಲಿ ಇದೆಯಂತೆ. ಶಾಸಕ ಯೋಗೇಶ್ವರ್ ಅವರ ಪುತ್ರಿ ನಿಶಾ ಕನ್ನಡ ಚಿತ್ರರಂಗಕ್ಕೆ ಪರಿಚಯಗೊಳ್ಳುತ್ತಿರುವುದು 'ಅಂಬರೀಷ'ದ ಮತ್ತೊಂದು ವಿಶೇಷ.

'ಐರಾವತ' ಅರ್ಜುನ್ ನಿರ್ದೇಶನದ ಸಿನಿಮಾ. 'ಅಂಬಾರಿ', 'ಅದ್ದೂರಿ' ಹಾಗೂ ಈಗ ಚಿತ್ರೀಕರಣ ನಡೆಯುತ್ತಿರುವ 'ರಾಟೆ' ಚಿತ್ರಗಳ ನಂತರ ಅರ್ಜುನ್ 'ಐರಾವತ'ದ ಕನಸು ಕಾಣುತ್ತಿದ್ದಾರೆ. ಈ ಚಿತ್ರದಲ್ಲಿ ದರ್ಶನ್ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ.

'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಹೊರತುಪಡಿಸಿದರೆ ಈಚಿನ ವರ್ಷಗಳಲ್ಲಿ ದರ್ಶನ್ ಸ್ವಮೇಕ್ ಸಿನಿಮಾಗಳಲ್ಲಿ ನಟಿಸಿದ್ದು ತೀರಾ ಕಡಿಮೆ. ಪ್ರಸ್ತುತ ಅವರು ಒಪ್ಪಿಕೊಂಡಿರುವ ಎರಡು ಚಿತ್ರಗಳು ಸ್ವಮೇಕ್ ಕಥನಗಳು. ಈ ಸ್ವಂತಿಕೆ ಕೂಡ 'ಅಂಬರೀಷ' ಹಾಗೂ 'ಐರಾವತ' ಚಿತ್ರಗಳ ಬಗ್ಗೆ ನಿರೀಕ್ಷೆ ಹೆಚ್ಚಿಸಲು ಕಾರಣವಾಗಿದೆ.

■ ರಘು